1 ನೇ ಹೆಚ್ಚುವರಿ ಹಿರಿಯ ನ್ಯಾಯಾಧೀಶರು ಮತ್ತು ಸಿಜೆಎಂ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮಂಡ್ಯ

ಸಿ.ಸಿ. 7155/2021

ಸಿ.ಡಬ್ಲ್ಯೂ-3 ಪಿ.ಡಬ್ಲ್ಯೂ-2

| | |
|---|---|
| ಸಾಕ್ಷಿಯ ಹೆಸರು | ಹೇಮಂತಕುಮಾರ |
| ತಂದೆ/ಗಂಡನ ಹೆಸರು | ಸುಂದರ್ ಕೃಷ್ಣ |
| ವಯಸ್ಸು | 32 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಾಸ | ಕೀಲಾರ ಗ್ರಾಮ, ಮಂಡ್ಯ |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 01.08.2026

**ಮುಖ್ಯ ವಿಚಾರಣೆಃ ಮಾನ್ಯ ಹಿ ಸ ಸ ಅ ರವರಿಂದಃ-**

ಚಾಸಾ.1 ನನ್ನ ತಂದೆ, ಚಾಸಾ.2 ನನ್ನ ಸಹೋದರ. ಚಾಸಾ.2 ರವರು ಮೃತ ಹೊಂದಿರುತ್ತಾರೆ. ಚಾಸಾ.4 ರಿಂದ ಚಾಸಾ.7 ರವರ ಪರಿಚಯರವಿರುತ್ತದೆ. ಆಪಾದಿತರು ಗೈರು ಹಾಜರಾಗಿದ್ದು, ಅವರ ಗುರುತಿನ ಬಗ್ಗೆ ಯವುದೇ ತಕರಾರು ಇಲ್ಲ ಎಂದು ಅವರ ಪರ ವಕೀಲರು ತಿಳಿಸಿರುತ್ತಾರೆ. ದಿನಾಂಕಃ 10.04.2023 ರಂದು ಬೆಳಿಗ್ಗೆ ಸುಮಾರು 7.45 ರ ಸಮಯದಲ್ಲಿ ನಾನು, ಚಾಸಾ.1 ಹಾಗೂ ಚಾಸಾ.2 ರವರು ದೊಣ್ಣಬಾಣಸವಾಡಿಯಲ್ಲಿದ್ದ ಸರ್ವೆ ನಂ. 22/4 ರಲ್ಲಿ ನೀರನ್ನು ಹಾಯಿಸುತ್ತಿರಬೇಕಾದರೆ ಆಪಾದಿತರು ಬದುವನ್ನು ಏಕೆ ಕಡಿದಿದ್ದಿರಿ ಎಂದು ಏಕಾಏಕಿ ಕೆಟ್ಟ ಶಬ್ದಗಳಿಂದ ಬೈಯಲು ಪ್ರಾರಂಭ ಮಾಡಿರುತ್ತಾರೆ. ಕೋಲೆ ಮಾಡದೇ ಬಿಡುವುದಿಲ್ಲ ಎಂದು ಆಪಾದಿತರು ಬೆದರಿಕೆ ಹಾಕಿರುತ್ತಾರೆ. ಚಾಸಾ.2 ರವರಿಗೆ 1 ನೇ ಆಪಾದಿತರು ಗುದ್ದಲಿಯಿಂದ ಕತ್ತಿನ ಎಡಭಾಗಕ್ಕೆ ಹಲ್ಲೆ ಮಾಡಿದ್ದು, 2 ನೇ ಆಪಾದಿತರು ಲಾಂಗ ಮಚ್ಚಿನಿಂದ ಚಾಸಾ.2 ರವರ ಎಡಕಿವಿಗೆ ಮತ್ತು ಮೂಗಿನ ಮೇಲೆ ಹಲ್ಲೆ ಮಾಡಿರುತ್ತಾರೆ. ಚಾಸಾ.2 ರವರಿಗೆ ಕಿವಿ ಮತ್ತು ಮೂಗಿನಲ್ಲಿ ರಕ್ತ ಬರುತ್ತಿತ್ತು. ಚಾಸಾ.1 ರವರು ಗಲಾಟೆಯನ್ನು ಬಿಡಿಸಲು ಹೋದಾಗ 2 ನೇ ಆಪಾದಿತರು ಮಚ್ಚಿನಿಂದ ಚಾಸಾ.1 ರವರ ಎರಡೂ ಭುಜಗಳಿಗೆ, ಸೊಂಟ ಮತ್ತು ತಲೆಗೆ ಹಲ್ಲೆ ಮಾಡಿರುತ್ತಾರೆ. ನಾನು ಏಕೆ ಗಲಾಟೆ ಮಾಡುತ್ತಿದ್ದಿರಿ ಎಂದು ಕೇಳಿದಾಗ 2 ನೇ ಆಪಾದಿತರು ಮಚ್ಚಿನಿಂದ ಮೂಗಿನ ಮೇಲೆ, ಮುಖಕ್ಕೆ ಹಣೆಗೆ, ತಲೆಯ ಮೇಲ್ಭಾಗಕ್ಕೆ ಹಾಗೂ ಎಡಕೈಗೆ, ಹಾಗೂ ಸೊಂಟದ ಮೇಲೆಯೂ ಸಹ ಹಲ್ಲೆ ಮಾಡಿರುತ್ತಾರೆ. ಗಲಾಟೆ ಶಬ್ದ ಕೇಳಿ ಚಾಸಾ.4, 5 ಹಾಗೂ 7 ರವರು ಸ್ಥಳಕ್ಕೆ ಬಂದು ಗಲಾಟೆಯನ್ನು ಬಿಡಿಸಿರುತ್ತಾರೆ. ನಂತರ ಆಪಾದಿತರು ನಿಮ್ಮನ್ನು ಸಾಯಿಸದೇ ಬಿಡುವುದಿಲ್ಲ ಎಂದು

ಬೆಧರಿಕೆಯನ್ನು ಹಾಕಿರುತ್ತಾರೆ. ಹಲ್ಲೆ ಮಾಡಿದ ಮಚ್ಚನ್ನು ಅಲ್ಲಿಯೇ ಬಿಸಾಡಿ ಹೋಗಿರುತ್ತಾರೆ. ಗುದ್ದಲಿಯನ್ನು ಬದುವಿನ ಪಕ್ಕದಲ್ಲಿ ಇಟ್ಟಿರುತ್ತಾರೆ. ಹಲ್ಲೆ ಮಾಡಲು ಬಳಸಿದ ಮಚ್ಚು ಮತ್ತು ಗುದ್ದಲಿಯನ್ನು ನೋಡಿದರೆ ಗುರುತು ಮಾಡುತ್ತೇನೆ. ಅವುಗಳನ್ನು ಈಗಾಗಲೇ ಮುದ್ದೆ ಮಾಲು-1 ಮತ್ತು 2 ಎಂದು ಗುರುತು ಮಾಡಲಾಗಿರುತ್ತದೆ. ನಂತರ ಕೀಲಾರ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ಹೆಚ್ಚಿನ ಚಿಕಿತ್ಸೆಯನ್ನು ಮಂಡ್ಯ ಆಸ್ಪತ್ರೆಯಲ್ಲಿ ತೆಗೆದುಕೊಳ್ಳಿ ಎಂದು ಹೇಳಿದ ಕಾರಣ ನಾನು ಮಂಡ್ಯ ಆಸ್ಪತ್ರೆಗೆ ಬಂದು ಹೆಚ್ಚಿನ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ನನ್ನ ಹಾಗೂ ಚಾಸಾ.2 ರವರ ಬಟ್ಟೆ ರಕ್ತವಾದ ಕಾರಣ ಪೊಲೀಸ್ ನವರು ಮುಂದಿನ ಕ್ರಮಕ್ಕಾಗಿ ಬಟ್ಟೆಗಳನ್ನು ವಶಪಡಿಸಿಕೊಂಡಿರುತ್ತಾರೆ. ಬಟ್ಟೆಗಳನ್ನು ಈಗಾಗಲೇ ಮುದ್ದೇ ಮಾಲು-3 ಮತ್ತು 4 ಎಂದು ಗುರುತು ಮಾಡಲಾಗಿರುತ್ತದೆ. ಘಟನೆಗೆ ಸಂಬಂಧಪಟ್ಟಂತೆ ಪೊಲೀಸ್ ನವರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆಪಾದಿತರ ಪರ ವಕೀಲರಿಂದಃ-**

ವಕೀಲರ ಕೋರಿಕೆಯ ಮೆರೇಗೆ ಪಾಟೀ ಸವಾಲಿಗೆ ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.)

ಓ ಹೇ ಕೇ ಸ ಇ ಒ

(ಶ್ರೀಮತಿ ಕೆ.ಲಕ್ಷ್ಮಿ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿಜೆಎಂ., ಮಂಡ್ಯ.